ಕಣ್ಣುಗಳು ಯಾಕೆ ಕೆಂಪಗೆ ಊದಿಕೊಂಡಿವೆ? ಅತ್ತಹಾಗಿದೆ. ನಿನ್ನ ಹಣೆಯ ಬೊಟ್ಟು ಕೂಡ ಅಳಿಸಿ ಹೋಗಿದೆ.' ವಾರ್ಡನ್ ಅತ್ಯಂತ ಆತ್ಮೀಯತೆಯಿಂದ ಅವಳನ್ನು ಬರಮಾಡಿಕೊಂಡರು.

'ಕ್ಷಮಿಸಿ ಮೇಡಂ. ನಾನು ಡೂಪ್ಲಿಕೇಟ್ ಎಸ್ ಎಸ್.ಎಲ್.ಸಿ ಮಾರ್ಕ್ಸ್ ಕಾರ್ಡ್‌ಗೆ ಅರ್ಜಿ ಸಲ್ಲಿಸಲು ಹೋಗಿದ್ದೆ. ಸ್ವಲ್ಪ ತಡವಾಯಿತು.'

'ಸರಿ ನಡೀ, ಹೊಟ್ಟೆಗೆ ಏನಾದರೂ ತಿಂದಿದ್ದೀಯೋ ಇಲ್ಲವೋ?'

'ನಿನ್ನ ಮುಖ ನೋಡಿದರೆ ತಿಳಿಯುತ್ತೇ. ಏನು ತಿಂದಿಲ್ಲ. ಮೊದಲು ಊಟ ಮಾಡು ಆಮೇಲೆ ನೋಡೋಣ' ತನ್ನದಲ್ಲದವರ ಈ ಆತ್ಮೀಯ ಮಾತುಗಳು ಅವಳ ಮನಸ್ಸು ಮುಟ್ಟಿದವು. ಕೆಲವು ದಿನಗಳವರೆಗೂ ಸುಜಿಯಿಂದ ಯಾವ ಸುದ್ದಿಯೂ ಬಾರದಿದ್ದುದು ನೋಡಿ ಕಳವಳವೆನಿಸಿತು. ನೋಡದೆ ಇರಲೂ ಸಾಧ್ಯವಾಗಲಿಲ್ಲ ಕೆಲವೇ ಆತ್ಮೀಯರಲ್ಲಿ ಅವಳೂ ಒಬ್ಬಳು.

ಕೊನೆಗೆ ಗೆಳತಿಯನ್ನು ನೋಡಬೇಕೆಂದು ತುಡಿಯುತ್ತಿದ್ದ ಮನಸ್ಸಿಗೆ ಸಮಾಧಾನ ಹೇಳಲು ಅವಳನ್ನು ಕಂಡು ಮಾತನಾಡಿಸಿದಳು. ಆದರೆ ಕೂಡಲೇ ಮತ್ತೆ ಮನಸ್ಸು ಭಾರವಾಯಿತು. ಸುಜಾತ ತುಂಬಾ ಸಂತೋಷದಲ್ಲಿದ್ದಳು.

'ಮೆಹರ್ ನನಗೆ ಮದುವೆ ಗೊತ್ತಾಗಿದೆ ಕಣೆ. ಅವರು ನಮ್ಮ ಕಾಲೇಜಿನಲ್ಲೇ ಪ್ರೊಫೆಸರ್'

'ಕಳ್ಳಿ ಲವ್ ಮ್ಯಾರೇಜಾ?'

'ಇಲ್ಲಾ ಮೆಹರ್ ಒಂಥರಾ ಅರೇಂಜ್ಡ್ ಮ್ಯಾರೆಜ್ ಒಂಥರಾ ಲವ್ ಮ್ಯಾರೆಜ್'

'ಅದು ಯಾವ ತರಹಾ? ಹುಡುಗಿ?...' ಮೆಹರ್ ಮನಸ್ಸಿನಾಳದಿಂದ ಬಂದ ಮಾತಾಗಿತ್ತು.

'ಅಪ್ಪ ಗಂಡು ಹುಡುಕುತ್ತಿದ್ದರು. ನಾನು ಇವರ ಪರಿಚಯ ತಿಳಿಸಿದೆ. ಎಲ್ಲರಿಗೂ ಒಪ್ಪಿಗೆಯಾಯಿತು.'

'ಬಹಳ ಒಳ್ಳೆಯದಾಯಿತು ಬಿಡು. ನಿನ್ನ ಮದುವೆಯಲ್ಲಿ ನಂದೇ ಓಡಾಟ.'

ಇದು ಮಾತ್ರ ಸುಜಾತಳಿಗೆ ಇಷ್ಟವಾಗಲಿಲ್ಲ. ಅಂತ್ಯ ನಿಷ್ಠೂರಕ್ಕಿಂತ ಆದಿ ನಿಷ್ಠೂರವೇ ಒಳಿತು. ಹೇಳಿಬಿಡುವುದೇ ಒಳ್ಳೆಯದೆನಿಸಿತು ಅವಳಿಗೆ.

'ಮೆಹರ್ ನನ್ನನ್ನು ತಪ್ಪು ತಿಳಿಯಬೇಡ್ವೇ. ಮದುವೆಗೆ ನೀನು ಬರುವುದು ಬೇಡ. ಅಪ್ಪಿ ತಪ್ಪಿ ನಿನ್ನ ಹೆಸರು ನನ್ನ ಬಾಯಿಂದ ಬಂದರೆ ಸುಮ್ಮನೆ ರಂಪ ಆಗುತ್ತದೆ. ಅಭ್ಯಾಸ ಬಲದಿಂದ ನಿನ್ನನ್ನು ನಾನು ಮಾನಸ ಎಂದು ಕರೆಯಲಾರೆ. ಹೊಸ ಸಂಬಂಧ. ಅವರು ಇದೇ ಕಾಲೇಜಿನಲ್ಲಿರುತ್ತಾರೆ. ಹಾಗಾಗಿ ಇನ್ನು ಮುಂದೆ ನಾನೇ ನಿನ್ನನ್ನು ಭೇಟಿ ಮಾಡುತ್ತೇನೆ.'

ಸಾವಿರ ಚೇಳುಗಳು ಒಮ್ಮೆಲೇ ಕಡಿದಂತಾಯಿತು ಮೆಹರ್‌ಗೆ. ಥೀ ಮನುಷ್ಯ ಸಂಬಂಧಗಳು ಎಷ್ಟು ಪೊಳ್ಳು. ಯಾರಲ್ಲೂ ಪ್ರೀತಿ, ವಿಶ್ವಾಸದ ಸೆಲೆಯೇ ಇಲ್ಲವೇ? ನನ್ನ ಪಾಡಿಗೆ ಇದ್ದ ನನ್ನನ್ನು ಕೆಣಕಿದವಳು ಅವಳೇ. ಗೆಳೆತನದ ಹೆಸರಿನಲ್ಲಿ ಮರೆತಿದ್ದ ಭಾವನೆಗಳನ್ನು ಜಾಗೃತಗೊಳಿಸಿದವಳು ಅವಳೇ. ಈಗ ಆಪ್ತ ಗೆಳತಿಯನ್ನು ಮದುವೆಗೆ ಬರಬೇಡ ಎನ್ನುತ್ತಿದ್ದಾಳೆ. ಗೆಳತಿಯನ್ನು ನೋಡುವ ಮಾತನಾಡಿಸುವ ತವಕ ಅವಳಲ್ಲಿತ್ತು ಬರುವಾಗ. ಈಗ ಎಲ್ಲವನ್ನೂ ಕಳೆದುಕೊಂಡಂತೆ. ನಡೆಯುತ್ತಾ ಹೋದಳು.. ಎಷ್ಟು ಹೊತ್ತು ನಡೆದಳೋ ಗೊತ್ತಿಲ್ಲ. ತಾನು ಗೂಡು ತೊರೆದ ಹಕ್ಕಿ. ತಾಯಿ ಹಕ್ಕಿ ಎಲ್ಲಿ ಎಂದು ತಿಳಿದರೂ ತನ್ನನ್ನು ಹತ್ತಿರ ಸೇರಿಸುತ್ತಿಲ್ಲ. ಬೇರೆ ಅಪರಿಚಿತ ಹಕ್ಕಿಗಳು ಆಪ್ತ ದನಿಗಳು ತನ್ನತ್ತ ರೆಕ್ಕೆ ಬಿಚ್ಚಿ ಕರೆಯುತ್ತಿವೆ. ಬಾಳಸಂಜೆಯಲ್ಲಿರುವ ಹಕ್ಕಿಗಳು. ಒಂದಿಷ್ಟು ಪ್ರೀತಿ, ಮಮಕಾರ ಆಸರೆ ಅಷ್ಟೇ ಅವು ಕೇಳುವ ಶುಲ್ಕ. ತನಗಾಗಿ ಹಂಬಲಿಸುತ್ತಿರುವಂತೆ ನಡೆಯಲಾರದೇ, ಮಾತನಾಡಲಾರದೇ ಪ್ರೀತಿಗಾಗಿ ಪರಿತಪಿಸುತ್ತಿರುವಂತೆ. ಸುಕ್ಕುಗಟ್ಟಿದ ಮೈಯಿ. ಬೆಳಕೇ ಇಲ್ಲದ ಕಣ್ಣುಗಳು. ನಡೆಯಲಾರದೇ ಹಾಸಿಗೆಗಂಟಿದ ದೇಹ. ಆ ಕರೆಗೆ ಓಗೊಡುವುದೇ ಸಂತೃಪ್ತಿಯ ದಾರಿ ಎನಿಸಿತು. ಹಲವು ಆತ್ಮೀಯ ಕೈಗಳು ತನ್ನತ್ತ ಚಾಚಿರುವಂತೆ ಕಂಡಿತು ಅವಳಿಗೆ. ಒಂದೇ ಕ್ಷಣದಲ್ಲಿ ಹಾರಿ ತನ್ನ ಗೂಡನ್ನು ಸೇರಿದಳು.

'ಮಾನಸ ಸಿಕ್ಕಿದಳಾ ನಿನ್ನ ಗೆಳತಿ? ಸದ್ಯ ಬಂದೆಯಲ್ಲ ತಾಯಿ. ಪಾಪ ಆ ಶಾರದಮ್ಮ ನಿನಗಾಗಿ ತುಂಬಾ ಹಂಬಲಿಸುತ್ತಿದ್ದರು. ನಿನ್ನ ಬರುವಿಕೆಗಾಗಿ ಬಾಗಿಲ ಕಡೆ ಪದೇಪದೇ ನೋಡುತ್ತಿದ್ದರು. ಈಗ ಒಂದು ಗಂಟೆಯ ಕೆಳಗೆ ತೀರಿಕೊಂಡರು.' ವಾರ್ಡನ್ ಮಾತನಾಡುತ್ತಲೇ ಇದ್ದರು.

ಮಾನಸ ದೊಪ್ಪನೆ ಕುಸಿದು ಕುಳಿತಳು.

●